ABHINAYA-GEETĀVALI

(A BOOK OF ACTION SONGS IN KANNADA)

FOR THE USE OF SCHOOLS

BY

G. N. LAKSHMAN PAI.

(ILLUSTRATED)

SECOND EDITION

Approved by the Director of Public Instruction, Madras

As Well As

BY THE DIRECTOR OF PUBLIC INSTRUCTION IN MYSORE.

ಸಚಿತ್ರ

ಅಭಿನಯಗೀತಾವಳಿ

ಪಾಠಶಾಲೆಗಳ ಉಪಯೋಗಾರ್ಥವಾಗಿ

ಜಿ. ಎನ್. ಲಕ್ಷ್ಮಣ ಪೈ,

ಇವರಿಂದ ರಚಿತವಾದದ್ದು

(ದ್ವಿತೀಯ ಮುದ್ರಣ)

ಪ್ರಕಾಶಕರು:

ಕ[illegible] ...ರು.

Price: 3 [illegible] ... ಕ್ರಯ: ೩ ಆಣೆ.

PRINTED AND PUBLISHED BY
H. ANANTHA KAMATH,
AT THE
HARI HARA PRESS AND BOOK-DEPOT,
PUTTUR, S. K.

First Edition: January, 1933.
Second Edition: June, 1933.

Communication received from the D. P. I.
in Mysore.

DEPARTMENT OF PUBLIC INSTRUCTION·
GOVERNMENT OF MYSORE.

OFFICE OF THE DIRECTOR OF PUBLIC
INSTRUCTION IN MYSORE.

No. T. B. C. 197/32-33. Bangalore, dated 17th April 1933.

ENCL.

FROM

The Director of Public Instruction in Mysore,
Bangalore.

To

The Manager,
Hari Hara Press and Book Depot,
Puttur, South Kanara,
(Railway Station, Kumbla)

Dear Sir,

In continuation of this office letter No. T. B. C. 197/32-33 dated the 9th February 1933 regarding patronage for your publication 'Abhinaya Geetavali', I write to inform you that the book has been recommended to the Chairmen of the several School Boards for purchasing copies of it for distribution among Primary Schools Libraries.

Yours faithfully,
(Sd.) **M. N. GOPALA IYER**
For Director.

ಪ್ರಸ್ತಾವನೆ

ರಾಗಯುಕ್ತವಾಗಿ ಪದ ಹಾಡುವುದನ್ನೂ ಅಂಗವಿಕ್ಷೇಪಾದಿಗಳಿಂದ ಅಭಿನಯ ಮಾಡುವುದನ್ನೂ ಚಿಕ್ಕವರು ಸ್ವಾಭಾವಿಕವಾಗಿ ಮೆಚ್ಚುವರು. ಮನೆಯಲ್ಲಿ ಹಿರಿಯರು ಹಾಡುವ ಗೀತಗಳನ್ನು ಆಲಿಸಿ, ತೊದಲುನುಡಿಗಳಿಂದ ಅವನ್ನು ಹಾಡಲು ಯತ್ನಿಸುವುದೂ, ದಸರಾ, ಮೊಹರಮ್‌ಗಳಲ್ಲಿನ ಹುಲಿವೇಷದವರು ಅಥವಾ ಬಯಲಾಟದ ವೇಷಧಾರಿಗಳು ಮಾಡುವ ಕುಣಿತನಟನೆಗಳನ್ನು ನೋಡಿ ಅಂತೆಯೆ ಅಭಿನಯಿಸಲು ಯತ್ನಿಸುವುದೂ, ಕಿರಿಯರ ಸ್ವಭಾವವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಹೀಗಾದ್ದರಿಂದ ಅವರ ಅಚ್ಚುಮೆಚ್ಚಿನ ಹಾಡು—ನಟನೆ—ಕುಣಿತಗಳ ಮೂಲಕವೆ ಅವರಿಗೆ ಪ್ರಾಥಮಿಕ ತರಗತಿಗಳಲ್ಲಿ ಶಿಕ್ಷಣವನ್ನು ಕೊಡುವುದು ಸುಲಭೋಪಾಯವಾಗಿದೆ. ಇವುಗಳಿಂದ ಅವರಲ್ಲಿ ವಸ್ತುಜ್ಞಾನ, ಭಾಷಾಜ್ಞಾನಗಳನ್ನು ಉಂಟುಮಾಡಬಹುದಲ್ಲದೆ ಅವರಿಗೆ ಮೃಗಪಕ್ಷ್ಯಾದಿಗಳ ವಿಷಯದಲ್ಲಿ ಭೂತದಯೆ, ಗುರುಹಿರಿಯರಲ್ಲಿ ಭಕ್ತಿ, ದೇಶಭಕ್ತಿ, ದೈವಭಕ್ತಿ ಇತ್ಯಾದಿ ಸದ್ಗುಣಗಳನ್ನೂ ಕಲಿಸಿಕೊಡಬಹುದು. ಅದರಿಂದಲೇ ಪ್ರತ್ಯಕ್ಷ ಬೋಧನಾರೀತಿಯಲ್ಲಿಯೂ, ಕಿಂಡರ್‌ಗಾರ್ಟನ್ ಕ್ರಮದಲ್ಲಿಯೂ ಅಭಿನಯಗೀತಗಳಿಗೆ ಬಲ್ಲವರು ಪ್ರಾಮುಖ್ಯವನ್ನು ಕೊಟ್ಟಿದ್ದಾರೆ.

ಹೀಗಿದ್ದರೂ ನಮ್ಮ ಹಲವು ಪಾಠಶಾಲೆಗಳಲ್ಲಿ ಅಭಿನಯಗೀತಗಳನ್ನು ಕಲಿಸುವುದಿಲ್ಲ. ತಕ್ಕುದಾದ ಪಠ್ಯಪುಸ್ತಕವಿಲ್ಲದಿರುವುದೇ ಇಂತಹ ಕೊರತೆಗೆ ಕಾರಣವೆನ್ನಬಹುದು. ಈ ಕುಂದನ್ನು ಕೆಲಮಟ್ಟಿಗಾದರೂ ನಿವಾರಿಸಬೇಕೆಂಬುದೇ ಈ ಚಿಕ್ಕ ಗೀತಾವಳಿಯ ಉದ್ದೇಶವಾಗಿದೆ. ವಿದ್ಯಾ ಇಲಾಖೆಯವರೂ ಇತರರೂ ನನ್ನ "ಪದ್ಯರತ್ನಾವಳಿ"ಗೆ ತೋರಿದ ಆದರವನ್ನು ಇದಕ್ಕೂ ತೋರುವರೆಂದು ನಂಬಿರುವೆನು.

ಈ ಪುಸ್ತಕರಚನೆಯಲ್ಲಿ ಉಪಯುಕ್ತ ಸಲಹೆಗಳನ್ನಿತ್ತ ಎಲ್ಲ ಸುಹೃತ್ತುಗಳಿಗೂ, ಇದರಲ್ಲಿ ಪ್ರಕಟವಾದ ಹಲವು ಚಿತ್ರಗಳ ಪಡಿಯಚ್ಚುಗಳನ್ನು ಉದಾರ ಮನಸ್ಸಿನಿಂದ ಕೊಟ್ಟ ಮಂಗಳೂರು ಶಾರದಾ ಛಾಪಖಾನೆಯ ಮ. ರಾ. ವಿ. ಎಸ್. ಕುಡ್ವರಿಗೂ ನನ್ನ ಕೃತಜ್ಞತಾಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುವೆನು.

ಪುತ್ತೂರು,
ತಾ. ೧-೧-೧೯೩೩.

ಜಿ. ಎನ್. ಲಕ್ಷ್ಮಣ ಪೈ

ದ್ವಿತೀಯ ಮುದ್ರಣಕ್ಕೆ ಮುನ್ನುಡಿ

ಹಲವು ವಿಮರ್ಶಕರ ಸೂಚನೆಯಂತೆ ಪುಸ್ತಕವು ಮಕ್ಕಳಿಗೆ ಆಕರ್ಷಕರವಾಗಿಯೂ ಬೋಧಕರವಾಗಿಯೂ ಆಗುವಂತೆ ಈ ಬಾರಿ ಚಿತ್ರಗಳ ಸಂಖ್ಯೆಯನ್ನು ಏರಿಸಲಾಗಿದೆ. ಈ ಚಿತ್ರಗಳನ್ನು ಸಕಾಲದಲ್ಲಿ ತಯಾರಿಸಿಕೊಟ್ಟ ನನ್ನ ಮಿತ್ರರಾದ ವಿಟ್ಲದ ಶ್ರೀಮಾನ್ ವಿ. ಬಾಬು ಮಾಸ್ತರರ ಉಪಕಾರವು ಚಿರಸ್ಮರಣೀಯವಾಗಿದೆ.

ಪುತ್ತೂರು,
ತಾ ೧೫-೬-೧೯೩೩.

ಲ. ಪೈ.

ಕೆಲವು ಅಭಿಪ್ರಾಯಗಳು

ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು, ಎಮ್. ಎ., ಬಿ. ಎಲ್., ಸೆಂಟ್ರಲ್ ಕಾಲೇಜ್, ಬೆಂಗಳೂರು: "... ತಾವು ವಿಶ್ವಾಸವಿಟ್ಟು ಕಳುಹಿಸಿದ ಸಚಿತ್ರ ಅಭಿನಯಗೀತಾವಳಿಯ ಪ್ರತಿ ತಲಪಿ, ಓದಿನೋಡಿ ಸಂತೋಷವಾಯಿತು. ಮನೆಯಲ್ಲಿ ಮಕ್ಕಳು ಆಗಲೇ ಕೆಲವು ಹಾಡುಗಳನ್ನು ಕಲಿತು ಕುಣಿಯುತಿದ್ದಾರೆ. ತಮ್ಮ ಕವಿತೆಗಳು ಚಿಕ್ಕ ಮಕ್ಕಳಿಗೆ ಮನೋರಂಜಕವಾಗಿಯೂ ಸುಲಭವಾದ ಶೈಲಿಯಲ್ಲಿ ಬರೆದುದಾಗಿಯೂ ಇರುವುದರಿಂದ ಮಕ್ಕಳ ಸಾಹಿತ್ಯದಲ್ಲಿ ಪ್ರಿಯಸ್ಥಾನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ತಮ್ಮ ಕೀರ್ತನಾಂಜಲಿಯ ಭಕ್ತಿಕವನಗಳೂ ಅಭಿನಯಗೀತಾವಳಿಗಳೂ ಕನ್ನಡಿಗರ ಆದರಕ್ಕೆ ಪಾತ್ರವಾಗಲೆಂದು ಹಾರೈಸುತ್ತೇನೆ. ..."

Sriman M. Govinda Pai, Manjeshwar: "... All songs are good – quite suitable to the needs of the children for whom they are intended. I am sure these songs will be taught in all our schools – the children will enjoy them. My congratulations to you. ..."

ಶ್ರೀಮಾನ್ ಪ. ರಮಾನಂದರಾಯರು, ಎಮ್. ಎ. ಎಲ್. ಟಿ. ಗವರ್ನ್ಮೆಂಟ್ ಕಾಲೇಜ್, ಮಂಗಳೂರು: "... ಎಳೆ ಮಕ್ಕಳಿಗೆ ಆನಂದವನ್ನುಂಟುಮಾಡುವ ಪುಟ್ಟ ಗೀತಗಳ ಸಂಗ್ರಹವಿದು. ಈ ಸಂಗ್ರಹದಲ್ಲಿರುವ ಪ್ರತಿಯೊಂದು ಕವನವೂ ಎಳೆಮಕ್ಕಳ ಮನಸ್ಸನ್ನು ಸೂರೆಗೊಂಡು, ಅವರಲ್ಲಿ ಸಹಜವಾಗಿ ಅಡಗಿರುವ ಕವಿತಾಸಕ್ತಿಯನ್ನು ಅಭಿವೃದ್ಧಿಸಿ ತೃಪ್ತಿಗೊಳಿಸುವುದರಲ್ಲಿ ಸಂದೇಹವಿಲ್ಲ. ... ಮನೋಹರವಾದ ಕವನಗಳ ಈ ಚಿಕ್ಕ ಪುಸ್ತಕವು ನಮ್ಮ ನಾಡಿನ ಪ್ರತಿಯೊಂದು ಮಗುವಿನ ಕೈಯಲ್ಲಿ ನಲಿದಾಡಲಿ ಎಂದೇ ನನ್ನ ಆಸೆ."

ಶ್ರೀಮಾನ್ ಎಮ್. ಎನ್. ಕಾಮತರು, ಕೆನರಾ ಹೈಸ್ಕೂಲ್, ಮಂಗಳೂರು. "... ಕ್ರಿಯಾಪದಗಳ ಅರ್ಥ, ವಿಶೇಷಣಗಳ ವೈಶಿಷ್ಟ್ಯ, ಆಖ್ಯೆಗಳ 'ವ್ಯಕ್ತಿ'ತ್ವ—ಇತ್ಯಾದಿಗಳನ್ನು ಮಕ್ಕಳು ತುಂಬಾ ತಿಳಿದು ಅಭಿನಯಿಸಿತೋರಿಸಲು ಕುತೂಹಲಬಡುವಷ್ಟು ಚೆನ್ನಾಗಿ ಹಲವು ರುಚಿಗಳಿಗೆ ತಕ್ಕಂತಹ (ಸುಲಭಸಾಮಾನ್ಯ ರಾಗಗಳ) ಗೀತಗಳಿರುವ ಈ ಚಿಕ್ಕ ಪುಸ್ತಕವು ಒಣಬರಟು ಎಂದು ತೋರುವ ವಿಷಯಗಳನ್ನು ಅಭ್ಯಸಿಸುವುದಕ್ಕೆ ಧಾರಾಳವಾಗಿ ಸಹಾಯಮಾಡುವುದಾಗಿ ನಂಬಿರುವ ಕಾರಣ, ಬರೆದವರ ಪ್ರಯತ್ನಗಳು ಸುಫಲಗಳನ್ನೀಯಲೆಂದು ಹರಸುತ್ತೇನೆ. . . ."

Hindu, *Educational & Literary Supplement, dated 28-2-1933:* ". . . . This book contains action songs containing a wide range of subjects. Written in simple style, the verses are peculiarly charming and compare favourably with the beautiful Nursery Rhymes in English This section of vernacular literature is yet to be developed in our country and therefore the efforts of the author are highly commendable. The book is well-fitted for use in Elementary Schools and the songs will, no doubt, become popular among the young folks."

ಪಾಠಗಳ ಅನುಕ್ರಮಣಿಕೆ

ಪಾಠ		ಪುಟ
೧	ಪ್ರಾರ್ಥನೆ	1
೨	ಚಿಕ್ಕು	2
೩	ನನ್ನ ಪಯಣ	3
೪	ಹಸು	4
೫	ಕನ್ನಡಿಗರು	5
೬	ಗಿಳಿ	7
೭	ನಾಯಿ	8
೮	ಜೋಗುಳಹಾಡು	9
೯	ತಿರುಪತಿದಾಸರು	10
೧೦	ಆಡು	11
೧೧	ಸ್ವಾಗತಗೀತ	12
೧೨	ಸ್ವರ್ಗ – ನರಕ	13
೧೩	ಹುಡುಗನ ಡಬ್ಬಿ	14
೧೪	ಗಡಿಯಾರ	16
೧೫	ವೀಣೆ	17
೧೬	ಚಂದ್ರ	18
೧೭	ಮನೆಗೆಲಸ	20
೧೮	ನವಿಲು	21
೧೯	ಹೂ ಮಾರುವವಳ ಹಾಡು	23
೨೦	ಅರಳೀಮರ	24
೨೧	ಮಂಗನ ಮದುವೆ	25
೨೨	ಹುಡುಗರೂ ಕೆರೆಯೊಳಗಿನ ಕಪ್ಪೆಗಳೂ	28
೨೩	ಬಣ್ಣಗಳು	31
೨೪	ತೋಳನೂ ಕುರಿಮರಿಯೂ	31
೨೫	ಪಂಜರದ ಗಿಳಿಯ ಪ್ರಲಾಪ	34
೨೬	ಅಣ್ಣನ ಮರುಕ	35
೨೭	ಆರೋಗ್ಯಗೀತ	38
೨೮	ಸೆರೆ	40
೨೯	ಬೇಡಿಕೆ	42

ಅಭಿನಯ ಗೀತಾವಳಿ

೧. ಪ್ರಾರ್ಥನೆ.



ರಾಗ: ಝುಲಾ—ತಾಳ: ಧುಮಾಳಿ.

(ಧೀರೇ ಬಾರೇ ತೋರೇ ಮೋರೆ) ಎಂಬಂತೆ

ಕರುಣಾ — ಭರಣಾ, | ಶರಣಾ — ದರಣಾ. ||
ಪೊರೆಯೈ ದೀನರ | ಪತಿತೋದ್ಧರಣಾ! || ಪಲ್ಲ ||

ಸೊಗದೆ,— ನಯದೆ, | ಹಿತದೆ,— ಪಥದೆ |
ಜಗದಲಿ ಬಾಳಲು | ವರವ ಕರುಣಿಸಿ— ||

ಚಾಲ್ { ವಿದ್ಯೆಯ ಕಲಿತು, | ಬುದ್ಧಿಯೊಳ್ ಬಲಿತು, |
ಧರ್ಮದಿ ಕಲೆತು, | ದುರ್ಮತಿಯುಳಿದು, |

ಸುರವರ! ನಿನ್ನನು | ಭಜಿಸುತಲನುದಿನ |
ಗರುವಿಕೆಯಲಿ ನಾವ್ | ಮೆರೆಯಲು ಹರಸಿ — || ೧ ||

---

೨. ಬೆಕ್ಕು.



ರಾಗ: ಕಲ್ಯಾಣಿ— ಏಕತಾಳ.

(ನೋಡು ನೋಡು ಗೋಪಿ ನಿನ್ನ) ಎಂಬಂತೆ

ಅರರೆ ಬೆಕ್ಕೆ, ನಿನ್ನ ಸೊಕ್ಕೆ! |
ಕಳ್ಳತನದಲಿ ||
ಹಿರಿದು ಮೊಸರು ಬೆಣ್ಣೆ ಕದ್ದು |
ತಿಂಬೆ ಮುದದಲಿ. || ೧ ||

ಹುಲಿಯ ರೂಪ ನಿನಗೆ ಇದ್ದ |
ರೇನು?— ವ್ಯರ್ಥವು. ||
ಹುಲಿಯ ಹಾಗೆ ಬಲುಮೆ ನಿನಗೆ |
ಇಲ್ಲ, ಸತ್ಯವು. || ೨ ||

ಇಲಿಯ ಹಿಡಿದು, ಅದನು ಕೊಂದು, |
ತಿಂದು ತೇಗುವೆ! ||
ಸಲವಹೊಂದಿ 'ಮ್ಯಾವು' 'ಮ್ಯಾವು' |
ಎಂದು ಕೂಗುವೆ! ||

---

೩. ನನ್ನ ಪಯಣ.

ಆದಿತ್ಯವಾರ ಕಲ್ಕತ್ತವನು ಸೇರ್ದೆ;
ಸೋಮವಾರದಲಿ ಢಿಲ್ಲಿಯ ನೋಡಿ, ಮುಂದೆ
ಕುಜವಾರ ಬೊಂಬಾಯಿ ಪಟ್ಟಣಕೆ ಹೋದೆ;
ಬುಧವಾರ ಬೆಂಗ್ಳೂರು ನಗರಿಗೈತಂದೆ;
ಗುರುವಾರ ಮದರಾಸು ಪಟ್ಟಣವ ಕಂಡೆ;
ಶುಕ್ರವಾರದಲಿ ರಾಮೇಶ್ವರಕೆ ಬಂದೆ;
ಶನಿವಾರ ಮಂಗ್ಳೂರ ಸೇರಿ ಮುದಗೊಂಡೆ.

☞ ಮಕ್ಕಳಿಗೆ ವಾರಗಳ ಹೆಸರುಗಳು ಬಾಯಿಪಾಠ ಬರುವಂತೆ ಮಾಡುವುದು ಈ ಗೀತದ ಮುಖ್ಯೋದ್ದೇಶವಾಗಿದೆ.

---

೪. ಹಸು.



ರಾಗ: ಧನಾಶ್ರೀ — ಆದಿತಾಳ.

(ಕರುಣಾಕರ ನೀನೆಂಬುವದ್ಯಾಕೊ) ಎಂಬಂತೆ

ಎಲೆ ಹಸುತಾಯೇ, | ನಿನ್ನುಪಕಾರವ |
ನೆಲದಲಿ ನಾ ಮರೆಯೆ. || ಪಲ್ಲ ||

ಸಲವಿಂ ಸ್ವರ್ಗದ | ಸುರಧೇನುವಿನಾ |
ಕುಲದಲಿ ಜನಿಸಿದೆ | ಉಪಕೃತಿ ಗೈಯೆ. || ಅ. ಪ. ||

ಒಲವಿಂದೀಯುವೆ | ಕುಡಿಯಲು ಹಾಲನು; |
ಕಲಸಲು ಅನ್ನಕೆ | ಮೊಸರನ್ನು; ||
ಬಳಸಲು ತಿನಸಿಗೆ | ಬೆಣ್ಣೆಯ ಮೇಣ್ ಸಲೆ |
ಸುಲಲಿತವಹ ತು | ಪ್ಪವ ಕೊಡುವೆ. || ೧ ||

ನೆಲವನು ಸಾರಿಸೆ | ಸೆಗಣಿಯನೀಯುವೆ; |
ಒಲೆಯನು ಉರಿಸಲು | ಬೆರಣಿಯನು; ||
ಹೊಲವನು ಬೆಳೆಸಲು | ಗೊಬ್ಬರವನು, ಬಲು |
ಬಲವನು ಹೆಚ್ಚಿಸೆ | ಭಾಗ್ಯವನೀವೆ. || ೨ ||

೫. ಕನ್ನಡಿಗರು.

ಸೀಮೆಯದಾವುದು?

ಕನ್ನಡವು.

ಜಿಲ್ಲೆಯದಾವುದು?

ಕನ್ನಡವು.

ಭಾಷೆಯದಾವುದು?

ಕನ್ನಡವು.

ಕನ್ನಡಿಗರೊ ನೀವ್?

ಅಹುದಹುದು.

ಪತ್ರವ ಬರೆವುದು—

ಕನ್ನಡದಿ.

ಮಿತ್ರರೊಳ್ ನುಡಿವುದು--

ಕನ್ನಡದಿ.

ಗೀತವ ಪಾಡ್ವುದು—

ಕನ್ನಡದಿ.

ನಾಥನ ನುತಿಪುದು—

ಕನ್ನಡದಿ.

ಒಲವಿನ ನುಡಿಯುದು —

ಕನ್ನಡವು.

ಸಲವಿನ ನುಡಿಯದು —

ಕನ್ನಡವು.

ಮೆರೆಯುವ ನುಡಿಯದು—

ಕನ್ನಡವು.

ಮರೆಯದ ನುಡಿಯದು—

ಕನ್ನಡವು.

ಕನ್ನಡಿಗರೊ ನೀವ್?

ಅಹುದಹುದು.

ಕಲೆಗಳ ನೆಲೆಯದು—

ಕರಿನಾಡು.

ಬೆಳೆಗಳ ನೆಲವದು—

ಸಿರಿನಾಡು.

ಕನ್ನಡಿ ಇಳೆಗದು—

ಸೊಗಬೀಡು.

ಕನ್ನಡವೆಮಗದು—

ತಾಯ್ನಾಡು.

ಕನ್ನಡಿಗರೊ ನೀವ್?

ಅಹುದಹುದು.

☞ ಮೇಲಿನ ಗೀತವು ಎಲ್ಲ ಮಕ್ಕಳಿಗೆ ಬಾಯಿಪಾಠ ಬಂದನಂತರ ಅಧ್ಯಾಪಕನು ಒಂದು ಮಗುವನ್ನು ನಾಯಕನನ್ನಾಗಿಯೂ ಬಾಕಿಯವುಗಳನ್ನು ಮರಿಗಳನ್ನಾಗಿಯೂ ಮಾಡಿ, ಗೀತದಲ್ಲಿರುವ ಮೊದಲನೆಯ ನುಡಿಗಳನ್ನು ನಾಯಕನಿಂದ ಕೇಳಿಸಬೇಕು. ಎರಡನೆಯ ನುಡಿಗಳನ್ನು ಮರಿಗಳಿಂದ ಏಕಕಂಠದಲ್ಲಿ ಹೇಳಿಸಬೇಕು.

೭. ಗಿಳಿ.



(ಮಿನುಗೆಲೆ ಮಿನುಗೆಲೆ ನಕ್ಷತ್ರ) ಎಂಬಂತೆ

ಅರಗಿಳಿ! ಮರಿಗಿಳಿ! ಬಾರಿಲ್ಲಿ! |
ಮರದಲಿ ಗೈಯುವೆ ಏನಲ್ಲಿ? ||
ಮನೆಯಿಲ್ಲದೆ ಬಳಲುವಿಯೇಕೆ?— |
ತಿನಿಸಿಗೆ ಬಲು ತೊಳಲಲುಬೇಕೆ? || ೧ ||

ಒಲಿಯುತ ಬಾ ನಮ್ಮಯ ಮನೆಗೆ, |
ಚೆಲುವಿನ ಪಂಜರವಿದೆ ನೆಲೆಗೆ. ||
ಮೆಲಲಿಕೆ ಹಣ್ಗಳನೀಯುವೆನು; |
ಬಲು ನೊರೆವಾಲನು ನೀಡುವೆನು. || ೨ ||

ಹಸುರಿನ ಬಣ್ಣದ ಚೆಲುವಕ್ಕಿ! |
ಹೊಸ ನುಡಿ ಕಲಿಸುವೆ, ನುಡಿವಕ್ಕಿ! ||
ಒಸೆದಾ ಮಾತನು ನೀನಾಡು! |
ಜನವನು ಬೀರುತ ನಲಿದಾಡು. || ೩ ||

೨. ನಾಯಿ.



॥ ಭೋಗಷಟ್ಪದಿ ॥

ಬೇಟೆನಾಯಿ, ಮಂದೆನಾಯಿ, |
ಜೂಲುನಾಯಿ, ಬಾಲನಾಯಿ, |
ಕುಂಟನಾಯಿ, ತಂಟೆನಾಯಿ — ನಾಯಿಜಾತಿಯು. ||
ಉದ್ದಮೂತಿ, ಗಿಡ್ಡಮೂತಿ, |
ಚಟ್ಟೆಮೂತಿ, ತಟ್ಟೆಮೂತಿ, |
ಒಟ್ಟುಮೂತಿ — ಎಂಬ ಹಲವು ಮೋರೆಯವುಗಳು. || ೧ ||

ಗುಣಗಳಲ್ಲಿ, ಬೊಗಳಿನಲ್ಲಿ, |
ಬೇಟೆಯಲ್ಲಿ, ಕೂಟದಲ್ಲಿ, |
ಚುರುಕು ಮಂದವೆಂಬ ಭೇದ ನಾಯಿಜಾತಿಗೆ. ||
ಎಲ್ಲರಲ್ಲಿ ಹಗೆಯನಾಳ್ವ |
ನಲ್ಲಿ ಭಕ್ತಿಯನ್ನು ತೋರ್ವ, |
ಸಲಹಿದವನ ಬಳಿಯ ಬಿಡದ, ಸ್ವಾಮಿಭಕ್ತನೆ! || ೨ ||

ಸ್ವಾಮಿಭಕ್ತಿ, ಶೂರತನವು, |
ಅಲ್ಪತುಷ್ಟಿ, ಸ್ವಲ್ಪನಿದ್ರೆ, |
ಚುರುಕುತನವು, ಸೂಕ್ಷ್ಮಬುದ್ಧಿ — ನಿನ್ನ ಗುಣಗಳು. ||
ಮನುಜನಂತೆ ಮಾಂಸ ಸಸ್ಯ |
ತಿಂಬ ನೀನು ನರಗೆ ಗೆಳೆಯ |
ನೆಂಬುದೊಪ್ಪತಕ್ಕ ಮಾತು, ಮೂಕಜೀವಿಯೆ! || ೩ ||

----

೮. ಜೋಗುಳಹಾಡು.

ಜೋ ಜೋ ಸೊಬಗಿನಕಣಿ, ಭಾಗ್ಯಮಣಿಯೇ! |
ಜೋ ಜೋ ಎನೆ ಮಲಗೆನ್ನರಗಿಣಿಯೇ!—ಜೋ ಜೋ. || ಪಲ್ಲ ||
ಬೇಕಾದ ಕಜ್ಜಾಯ ತಿನಲಿಕ್ಕೆ ಕೊಡುವೆ; |
ಆಕಳಹಾಲನು ಕುಡಿಯಲು ಬಡುವೆ; |
ಚಂದದ ಗೊಂಬೆಯನಾಡಲು ಕೊಡುವೆ; |
ಕುಂದಣದೊಡವೆಯ ಮೈಗೆ ತೊಡಿಸುವೆ—ಜೋ ಜೋ. || ೧ ||

ನಗು, ನಿನ್ನ ರಾಜ್ಯವ ಕನಸಿನೊಳ್ ನೋಡು! |
ಸೊಗದಿಂದ ಮಕ್ಕಳೊಂದಿಗೆ ನಲಿದಾಡು! |
ನಗುತ ತೊದಲ್ನುಡಿಗಳನಲ್ಲಿ ಆಡು! |
ಮುಗಿಲಾಗಿ ಸಕಲರ್ಗೆ ಹರುಷವ ನೀಡು!— ಜೋ ಜೋ. || ೨ ||

ಮುಗುಳೆ! ಮಕ್ಕಳರಾಜ್ಯದೊಡತಿಯ ನೋಡಿ |
ಜಗಳವಾಡಲುಬೇಡ!— ಅವಳ ಮುದ್ದಾಡಿ, ||
ಮೊಗದ ಮುತ್ತಿನ ಸವಿಯನು ಆಕೆಗುಣಿಸು! |
ಸೊಗದ ಲೀಲೆಯ ತೋರಿ, ಆಕೆಯ ಕುಣಿಸು!—ಜೋ ಜೋ. || ೩ ||

೮. ತಿರುಪತಿದಾಸರು.



ದಾಸರ ನೋಡಿದಿರೊ, | ತಿರುಪತಿ |
ದಾಸರ ನೋಡಿದಿರೊ! ‖ ಪಲ್ಲ ‖

ಈಶನ ಪೊಗಳುವ | ಗೀತವ ಪಾಡುತ, |
ದೇಶವ ತಿರುಗುವ | ವಿಠ್ಠಲದಾಸರ— ‖ ಅ. ಪ. ‖

ಶ್ರುತಿವಿಡಿಯುತ ಮೊದಲು | 'ತಣ್' 'ತಣ್' |
ತಾಳವ ಹೊಡೆಯುವರು. ‖
'ಭಂ' 'ಭಂ' ಎನ್ನುತ | ಶಂಖವನೂದುತ, |
'ಝ್ಯಂ' 'ಝ್ಯಂ' ಎನ್ನುತ | ಜಾಗಟೆ ಜಡಿವರು. ‖ ೧ ‖

ಕಾಲಿಗೆ ಕಟ್ಟಿಹರು | 'ಝುಣಿಝುಣಿ |
ಲೆ'ನ್ನುವ ಗೆಜ್ಜೆಗಳ ‖
'ತಕ ತಕ್ಕ ಧಿಮಿ ಧಿಮ್ಮಿ | ತೈ ತಕ್ಕ ತಕ ತಕ್ಕ |
ತಕ್ಕ ಧೀಂ ಧೀಂ ತಕ್ಕ' | ಎನ್ನುತ ಕುಣಿವರು. ‖ ೨ ‖

ಮದ್ದಳೆ ಬಡಿಯುವರು | 'ಧೀಂ' 'ಧೀಂ' |
ಸದ್ದನು ಮಾಡುವರು. ||
ಹಾಡುತ, ನಲಿನಲಿ | ದಾಡುತ, ಕೈಗಳ |
ನೀಡುತ ಭಿಕ್ಷೆಯ | ಬೇಡುವ ದಾಸರು. || ೩ ||

☞ ಮಕ್ಕಳಿಗೆ ಶ್ರುತಿ, ತಾಳ, ಶಂಖ, ಜಾಗಟೆ, ಮದ್ದಳೆ – ಇತ್ಯಾದಿಗಳ ಪರಿಚಯವನ್ನುಂಟುಮಾಡುವುದು ಈ ಗೀತದ ಮುಖ್ಯೋದ್ದೇಶವಾಗಿದೆ.

---

೧೮. ಆಡು.



|| ಶರಷಟ್ಪದಿ ||

(ಬಾಲಕನಾಗಿರೆ । ಹಾಲನು ಕುಡಿಸುತ) ಎಂಬಂತೆ

ಗಿಡ್ಡದ ಬಾಲದ, | ಉದ್ದದ ಗಡ್ಡದ, |
ದಡ್ಡತನವ ತಲೆದೋರಿಸದ, |
ಗಿಡ್ಡದ ಕೋಡುಗ | ಳೊಡ್ಡುತ ಹೋರುವ, |
ಗುಡ್ಡೆಯೊಳಾಡುವ ಗಡುಸಾಡೇ! || ೧ ||

ಕಾಡಿನಸೊಪ್ಪನು | ಬೇಡೆನ್ನದೆ ತಿನು |
ನಾಡಿನಮರಿಯೇ, ನೀ ಬಾರೆ! |
ಆಡೆನ್ನೊಡನೊಡ | ನಾಡಿಗನಾಗಿರು, |
ನಾಡಿನ ಮೃಗಗಳಿಗರಸಾಗು. || ೨ ||

ಕಾಡೆಲೆಗಳ ಮೆಲು; | ತೋಡಿನ ನೀರಾ ಕುಡಿ; |
ನೀಡ್ವೆ ಕೇಡಿಲ್ಲದ ಹಾಲ. |
ಆಡಿನತಾಯೇ! | ಕೇಡಿಗನಾಗೆನು, |
ಮಾಡುವೆನೊಳ್ಳಿತ ನಿನ್ನಂತೆ. || ೩ ||

☞ ೧ನೆ ನುಡಿಯಲ್ಲಿ ಹೋತನ ವಿಷಯವನ್ನೂ, ೨ನೆ ನುಡಿಯಲ್ಲಿ ಆಡಿನ ಮರಿಯ ವಿಷಯವನ್ನೂ, ೩ನೆ ನುಡಿಯಲ್ಲಿ ಆಡಿನ ತಾಯ ವಿಷಯವನ್ನೂ ಹೇಳಲಾಗಿರುವುದನ್ನು ಅಧ್ಯಾಪಕನು ಮಕ್ಕಳಿಗೆ ಸೂಚಿಸಬೇಕು.

---

೧೧. ಸ್ವಾಗತಗೀತ.

ಸ್ವಾಗತಂ - ಸ್ವಾಗತಂ - ಸುಸ್ವಾಗತಂ.

ಹಿರಿಯರೆ, ವಿದ್ಯಾ | ವಂತರೆ, ನಿಮಗೆ |
ಸುರಿತಿಹ ಬಲು ಧೀ | ಮಂತರೆ ನಿಮಗೆ |

ಸ್ವಾಗತಂ - ಸ್ವಾಗತಂ - ಸುಸ್ವಾಗತಂ.

ಕಿರಿಯರನೊಲಿದಾ | ಗಮಿಸಿದ ನಿಮಗೆ |
ಮರಿಗಳ ಕೂಗನು | ಗಮನಿಪ ನಿಮಗೆ ||

ಸ್ವಾಗತಂ - ಸ್ವಾಗತಂ - ಸುಸ್ವಾಗತಂ.

ಬಂದಿಹ ಮರಿಗಳು | ನಾವ್ ಕೇಸರಿಗಳು |
ಮುಂದಾಗುವ ತೆರ | ಹರಸುವ ನಿಮಗೆ ||

ಸ್ವಾಗತಂ - ಸ್ವಾಗತಂ - ಸುಸ್ವಾಗತಂ.

☞ ಶಾಲೆಯನ್ನು ಸಂದರ್ಶಿಸಲು ಬರುವ ಅಥವಾ ಶಾಲಾವರ್ಧಂತ್ಯುತ್ಸವ ಸಂದರ್ಭಗಳಲ್ಲಿ ಪ್ರೇಕ್ಷಕರಾಗಿ ಬರುವ ದೊಡ್ಡಮನುಷ್ಯರಿಗೆ ಸ್ವಾಗತವೀಯುವಾಗ ಅಧ್ಯಾಪಕನು ಈ ಗೀತವನ್ನು ಮಕ್ಕಳಿಂದ ಹಾಡಿಸಬೇಕು.

೧೨. ಸ್ವರ್ಗ - ನರಕ.





ಮೋದಗೊಂಡು ನಗಲು ಸ್ವರ್ಗ;
ಜೈ ಜೈ ಜೈ
ಖೇದಗೊಂಡು ಅಳಲು ನರಕ.
ಹಾ ಹಾ ಹಾ

ಸುಜನರಲ್ಲಿ ಸ್ನೇಹ ಸ್ವರ್ಗ;
ಜೈ ಜೈ ಜೈ

ಕುಜನರಲ್ಲಿ ಸ್ನೇಹ ನರಕ.
ಹಾ ಹಾ ಹಾ

ಹಿರಿಯರಲ್ಲಿ ಭಕ್ತಿ ಸ್ವರ್ಗ;
ಜೈ ಜೈ ಜೈ
ಕಿರಿಯರಲ್ಲಿ ವೈರ ನರಕ.
ಹಾ ಹಾ ಹಾ

ಮುಂದೆ ಅಡಿಯನಿಡಲು ಸ್ವರ್ಗ;
ಜೈ ಜೈ ಜೈ
ಹಿಂದೆ ಅಡಿಯನಿಡಲು ನರಕ.
ಹಾ ಹಾ ಹಾ

ಒಡೆಯನಲ್ಲಿ ಭಕ್ತಿ ಸ್ವರ್ಗ;
ಜೈ ಜೈ ಜೈ
ಬಡವರಲ್ಲಿ ದ್ವೇಷ ನರಕ.
ಹಾ ಹಾ ಹಾ

---

೧೩. ಹಣದ ಡಬ್ಬಿ.

ರಾಗ: ಹಿಂದುಸ್ಥಾನಿ ಕಮಾಚ್—ರೂಪಕತಾಳ.

(ಬಾಂಧವರೆಲ್ಲರು ನೋಡದಿ ಕೂಡೀ) ಎಂಬಂತೆ

ತಾತನು ಕೊಟ್ಟನು ಡಬ್ಬಿಯನೊಂದನು |
ಹಣವನು ಕೂಡಿಸಿ ಇಡಲೆಂದು. ||
ಮಾತೆಯು ಕೊಟ್ಟಳು ಮುಕ್ಕಾಲೊಂದನು, |
ಹಾಕಿದೆನದರಲಿ ಮುದಗೊಂಡು. || ೧ ||

ಅಣ್ಣನು ಜಾತ್ರೆಗೆ ಖರ್ಚಿಗೆ ಕೊಟ್ಟನು |
ಆಣೆಯನೊಂದನು ನಿಕ್ಕಲಿನಾ; ||
ಸಣ್ಣದು ಬೆಳ್ಳಿಯ ಚವುಲವನತ್ತಿಗೆ |
ಯಿತ್ತಳು — ಹಾಕಿದೆ ಡಬ್ಬಿಯೊಳು. || ೨ ||



ಅಕ್ಕನು ಬೆಳ್ಳಿಯ ಪಾವಲಿಯೊಂದನು, |
ಭಾವನು ಒಂದು ಅದೇಲಿಯನು, ||
ಕಕ್ಕನು ಟಣ್ಣನೆ ರೂಪಾಯ್ ಒಂದನು |
ಇತ್ತರು — ಹಾಕಿದೆ ಡಬ್ಬಿಯೊಳು. || ೩ ||

ಸಾದರದಿಂದಲಿ ಮಾವನು ಕೊಟ್ಟನು |
ರೂಪಾಯ್ ಎರಡನು; ವರಹವನು ||
ಸೋದರ ಅತ್ತೆಯು ಕೊಟ್ಟಳು—ಎಲ್ಲವ |
ನೋದದಿ ಹಾಕಿದೆ ಡಬ್ಬಿಯೊಳು. || ೪ ||

ಎನ್ನಯ ಡಬ್ಬಿಯ ಭಾರವ ನೋಡುತ |
ತಂದೆಯು ನುಡಿದನು ತೋಷದಲಿ, ||

"ಕಾಸಿಗೆ ಕಾಸನು ಕೂಡಿಡು, ಮಗುವೇ, |
ಧನಿಯೆನಿಸುವೆ ನೀ ಲೋಕದಲಿ." ‖ ೫ ‖

☞ ವಿದ್ಯಾರ್ಥಿಗಳಿಗೆ ನಾಣ್ಯಗಳ ಭೇದವನ್ನೂ ಬಳಗದವರ ಸಂಬಂಧವನ್ನೂ ತಿಳಿಯಪಡಿಸುವುದು ಈ ಹಾಡಿನ ಮುಖ್ಯೋದ್ದೇಶವಾಗಿದೆ.

೧೪ ಗಡಿಯಾರ.

‖ ರಗಳೆಯ ಪ್ರಭೇದ ‖

(ಸಾಗರ ಹಾವೇ ಹಾವೊಳು ಹೂವೇ) ಎಂಬಂತೆ

ಎಲೆ ಗಡಿಯಾರವೆ! ನಿನ್ನಾಕಾರವೆ! |
ಸಲವಿಂ ಅಂಕೆಯಮನೆಗಳ ಹಾರುವೆ! ‖
ಚಲಿಸುವ ಕೈಗಳ ಸುಳಿವಿಂ ತೋರುವೆ! |
ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್. ‖ ೧ ‖

ಹಗಲಿರುಳಲಿ ನಡೆಯುವೆ ಸೊಗವೆರಸಿ |
ಬಗಲಲಿ ತಾಸಿನರಾಶಿಯ ವಹಿಸಿ. ‖
ಮಿಂಗೆ ದಿನ, ಮಾಸ, ಬರಿಸಗಳ ಕುಣಿಸಿ. |
ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್. ‖ ೨ ‖

ಹೊತ್ತನು ನೀವ್ರುದೆ ನಿನ್ನಯ ಕೂಟ; |
ಹೊತ್ತನು ನುಂಗುವುದದೆ ನಿನ್ನೂಟ; ‖
ಹೊತ್ತಿನೊಡನೆ ಮುಂಬರಿವುದೆ ಆಟ. |
ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್. ‖ ೩ ‖



“ಕಳೆದಾ ಸಮಯವು ಬಾರದು ಹಿಂದೆ, |
ಅಲಸದೆ ಸತ್ಕೃತಿಯೆಸಗೆಲೊ ಇಂದೆ;” ||
ಒಲವಿಂದೆನ್ನುವೆ, “ಅಡಿಯಿಡು ಮುಂದೆ.” |
ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್ ಟಿಕ್ ಟಕ್. || ೪ ||

---

೧೫. ವೀಣೆ.

[ಹೆಣ್ಣುಮಕ್ಕಳಿಗೆ ಸಂಬಂಧಪಟ್ಟದ್ದು]

ರಾಗ: ಜಂಜೋಟಿ—ರೂಪಕತಾಳ.

(ಚಂದ್ರನು ಮೂಡುವನಿದೋ) ಎಂಬಂತೆ

ವೀಣೆಯ ಕೊಡು ಗೆಳತೀ, | ಹೇಮಾವತಿ! || ಪಲ್ಲ ||

ಜಾಣೆಯೆ, ಜಾಜಿಸು | ತದ, ಪದ ಹಾಡುವೆ. ‖ ಅ. ಪ. ‖

ಸ ರಿ ಗ ಮ ಪ ಧ ನಿ ಸ। ಸ ನಿ ಧ ಪ ಮ ಗ ರಿ ಸ।

ಸ್ವರಗಳ ಪೋಣಿಸುತ | ರಾಗವ ಬರಿಸುವೆ. ‖ ೧ ‖



ಮೋಹನ ರಾಗದಲಿ | ಗೀತವ ಪಾಡುತಲಿ, |

ಮೋಹಿಸುವಂತೆ ಅದ | ನಂತೆಯೆ ನುಡಿಸುವೆ. ‖ ೨ ‖

---

೧೬. ಚಂದ್ರ.

‖ ಶರಷಟ್ಪದಿ ‖

ಚಂದಿರ, ಶೋಭಾ |
ಮಂದಿರ, ಬಾ, ಬಾ! |
ಕಂದನ ಕರೆಯುನು ಕೇಳೀಗ. ‖
ಕಂದಿದೆ ನಿನ್ನೆದೆ |
ಗೆಂದರು ಜನರದ |
ರಂದವ ತಿಳಿಸೈ, ನೀ ಬೇಗ. ‖ ೧ ‖

ಕಿರುಗೆರೆಯಂದದಿ |
ಮೆರೆದೈ ಪಾಡ್ಯದಿ, |
ಮಿರುಗುತ ಬೆಳೆದೈ ದಿನದಿನಕೆ. ||
ಕಿರಿಮಗು ನಾನಸು |
ಕರಿಸುತ ನಿನ್ನನು, |
ಸರಿವೆನು ಮೆಲ್ಲನೆ ಹಿರಿತನಕೆ. || ೨ ||



ಕಲೆಗಳು ನಿನ್ನೊಳು |
ನೆಲಸಿದ ಕಾರಣ |
ಸಲಿವುದು ಲೋಕವು ನಿನ್ನಿಂದ. ||
ಚೆಲುವಿನ ಕಲೆಗಳು |
ಕಲೆತರೆ ನನ್ನೊಳು, |
ನೆಲವನು ಸಲಿಸುವೆ ಗೆಲವಿಂದ. || ೩ ||

೧೭. ಮನೆಗೆಲಸ.

[ಹೆಣ್ಣುಮಕ್ಕಳಿಗೆ ಸಂಬಂಧಪಟ್ಟದ್ದು]

ರಾಗ: ಸುರುಟಿ — ಆದಿತಾಳ.

(ಆರತಿಯೆತ್ತಿರೆ ನಾರಿಯರೆಲ್ಲರು) ಎಂಬಂತೆ

ಮನೆಗೆಲಸದ ಪರಿ | ಯುಸುರುವೆನೀಗಲೆ, |
ವಿಸಯದೊಳೆಲ್ಲವ | ಕಲಿವುದು, ಜಾಲೇ! || ಪಲ್ಲ ||

ಹಲ್ಲನುಜ್ಜುತ, ಮುಖ | ತೊಳೆಯುತ, ವಿನಯುತ, |
ಮೆಲ್ಲನೆ ನೊಸಲಲಿ | ಬೊಟ್ಟಿಡಬೇಕು. || ೧ ||

ತಲೆಯನು ಬಾಚುತ, | ತುರುಬನು ಕಟ್ಟುತ, |
ಚೆಲುವಿನಲಂಕಾರ | ಮಾಡಲುಬೇಕು. || ೨ ||

ದ್ವಾರದಿ ರಂಗೋಲೆ | ಬಿಡಿಸುತ, ನೆಲವಾ |
ಸಾರಿಸಿ, ಮನೆ ಶುಚಿ | ಯಿಡಬೇಕು ಸತತ. || ೩ ||

ಕಸವ ಗುಡಿಸಬೇಕು; | ಮುಸುರೆಯುಜ್ಜಲುಬೇಕು; |
ಶಶಿಮುಖಿ, ನೀರನು | ಸೇದಲುಬೇಕು. || ೪ ||

ಮೊಸರ ಕಡೆಯಬೇಕು; | ರಾಗಿ ಬೀಸಲುಬೇಕು; |
ಹಸನು ಮಸಾಲೆಯ | ಕಡೆಯಲುಬೇಕು. || ೫ ||

ಎಸರಿಟ್ಟು ಅನ್ನವ | ಸಿದ್ಧಗೊಳಿಸಬೇಕು; |
ಬಿಸಿಯ ಮೇಲೋಗರ | ಮಾಡಲುಬೇಕು. || ೬ ||

ಮನೆಯವರಿಗೆ, ಬಂದ | ಅತಿಥಿಗಳಿಗೆ ಮತ್ತೆ |
ಸನುಮತದೂಟವ | ಬಡಿಸಲುಬೇಕು. || ೭ ||

ಚೊಕ್ಕಟದರಿವೆಯ | ನೊಗೆಯಲುಬೇಕು; |
ಮಕ್ಕಳ ಸಂತೈಸಿ, | ಆಡಿಸಬೇಕು. || ೮ ||

ದೇವರ ಮಹಿಮೆಯ | ಪೊಗಳುತಲಾತಗೆ |
ಸಾವಿರ ವಂದನೆ | ಮಾಡಲುಬೇಕು. ‖ ೯ ‖

೧೮. ನವಿಲು.



ಸೊಬಗಿನ ನವಿಲಿನ, |
ಕೊಂಕಿದ ಕೊರಳಿನ, |
ಕಣ್ಣಿನ ತೂವಿನ, ಜೋಡೊಂದು. ‖

ಹೆಣ್ಣಾದು ಕಣ್ಣಿನ |
ಬಣ್ಣದ ಗರಿಗಳ |
ಬಿನ್ನಣವಿಲ್ಲದ ಸವಿಲೊಂದು. || ೧ ||

ಕಾಮನಬಿಲ್ಲಿನ |
ಬಣ್ಣದ ಕಣ್ಣಿನ |
ಬಣ್ಣಿಸೆಗೊಂಡಿಹ ಗಂಡೊಂದು. ||
ಕುಣಿಕುಣಿ, ಸವಿಲೇ, |
ಗುಡುಗದೊ ಕೇಳಿತು! |
ಮಣಿಯಿಸು ಕೊರಳನು, ಕೇಗಿಂದು. || ೨ ||

ಗರಿಗಳನರಳಿಸಿ, |
ಜುಟ್ಟನು ಕೆದರಿಸಿ, |
ಹೆಣ್ಣಿನ ತಾಳಕೆ ಕುಣಿಯೈ! ||
ಹಾವನು ತಿನ್ನೈ! |
ಹುಳುಗಳ ಸವಿಯೈ! |
ನೆಲವನು ಕೆದರುತ ಕುಣಿಕುಣಿಯೈ! || ೩ ||

ಕೇಗೆಲೆ ಸವಿಲೇ, |
ಬಣ್ಣದಕವಿಲೇ, |
ಕಣ್ಣಿಸಕವಲೇ! — ಹೆಣ್ಣೊಡನೆ. ||
ಬಾಗುವೆ ವಾಣಿಯ |
ವಾಹನ, ಸವಿಲೇ, |
ರಾಗವ ಹೇಳಲು, ನಾಸೊಲಿವೆ. || ೪ ||

೧೯. ಹೂ ಮಾರುವವಳ ಹಾಡು.

[ಹೆಣ್ಣುಮಕ್ಕಳಿಗೆ ಸಂಬಂಧಪಟ್ಟದ್ದು]



ಬನ್ನಿರಿ, ಬನ್ನಿರಿ, ಬಾಲೆಯರೆಲ್ಲರು |
ನೋಡಿರಿ ಚಂದದ ಹೂಗಳನು. ||
ತನ್ನಿರಿ ಚಿಲ್ಲರೆ ದುಡ್ಡನು, ಸುಮಗಳ |
ಕೊಳ್ಳಿರಿ, ಪರಿಮಳದುವ್ವುಗಳನು. || ೧ ||

ರಾಧೆಗೆ ಕೇದಗೆ, ಸೋಮಿಗೆ ಸಂಪಗೆ, |
ಸೀತೆಗೆ ಸೇವಂತಿಗೆಯಿಹುದು. ||
ಸರಳೆಗೆ ಕಂಪಿನ ಸುರಗಿಯ ಸುಮವಿದೆ, |
ವರದೆಗೆ ಇರುವಂತಿಗೆಯಿಹುದು. || ೨ ||

ಕಸ್ತೂರಿಗೆ ಕತ್ತುರಿಯಮಲ್ಲಿಗೆಯು, |
ನಾಗಿಗೆ ಪಾದರಿಮಲ್ಲಿಗೆಯು, |
ಲಲಿತೆಗೆ ಪರಿಮಳಭರಿತ ಗುಲಾಬಿಯು, ||
ಗಿರಿಜೆಗೆ ಜಾಜಿಯು ಇರುತಿಹುದು. || ೩ ||

ವಾರಿಜೆಯವಳಿಗೆ ಪಾರಿಜಾತ, ಮೇಣ್ |
ಸುಂದರಿಗಿಲ್ಲಿದೆ ಮಂದಾರ. ||
ಶ್ರೀದೇವಿಗೆ ತಾವರೆಯು, ಸುನಂದೆಗೆ |
ಚಂದ ಸುಗಂಧಿಯು ಇರುತಿಹುದು. || ೪ ||

☞ ಮಕ್ಕಳಿಗೆ ವಿವಿಧ ತರದ ಹೂಗಳ ಪರಿಚಯವನ್ನುಂಟುಮಾಡುವುದು ಈ ಗೀತದ ಮುಖ್ಯೋದ್ದೇಶವಾಗಿದೆ.

---

೨೦. ಅರಳೀಮರ.



ಅರಳಿಯಮರವೇ, | ಮರಗಳಿಗರಸೇ, |
ನೆರಳಿನ ಮರವೇ, ಹೆಮ್ಮರವೇ! ||
ಬೀಳಲುಗಡ್ಡದ | ಹಳೆಮರ ಮುನಿಯೇ, |
ಬೀಳುವೆ ನಿನ್ನಯ ಪದಗಳಿಗೆ. || ೧ ||

ಬಲಗೊಂಡೆಸಗಿದ | ಪೂಜೆಯ ಕೈಗೊಳು! |
ತೊಲಗಿಸು ಶನಿಪೀಡೆಯ ಜವದೆ. ||

ಚಿಲಿಪಿಲಿ ಹಕ್ಕಿಗ | ಳುಣಿಸಿಸ ಮರವೇ, |
ಗಲಿಗಿಲಿ ಸಲಿಯುವ ಜಲದಲವೇ! || ೨ ||

ಬೋಧಿಯ ಮರವೇ, | ಬೋಧಿಸೆಸಗೆ ಪರ |
ಬಾಧೆಯುರಿಯ ಕಳೆಯುವ ಪರಿಯ. ||
ಸಣ್ಣದು ಬೀಜದೆ | ಹುಟ್ಟಿದ ನೀ ಹಿರಿ |
ಯಣ್ಣನೆನಿಸಿ ಮೆರೆಯುವ ಬಗೆಯ. || ೩ ||

---

೨೧. ಮಂಗನ ಮದುವೆ.

ಬಿಸಿಲೂ ಮಳೆಯೂ
ಕೂಡಿದುವು;
ಸೆಕೆಯನು, ತಂಪನು
ಮಾಡಿದುವು.

ಕೋತಿಯು ಮಾಡಿತು
ತುಂಟತನ.
ಕೋಳಿಯು ಮಾಡಿತು
ಮೂರ್ಖತನ.

ಕೋತಿಗು ಕೋಳಿಗು
ನಂಟತನ
ಮಾಡಲುಬೇಕೆಂ
ಬುವ ಹದನ

ಮೃಗಗಳು ಖಗಗಳು
ಚರ್ಚಿಸುತ,
ಮದುವೆಗೆ ಮಾಡಿದ
ರಣಿ ನಗುತ.

ಮಂಗಗೆ ಪಂಚೆಯು
ಸುಡಿಸಿದರು;
ರಂಗಿನ ಅಂಗಿಯು
ಹಾಕಿದರು;
ಸಿಂಗರದೊಡವೆಯು
ತೊಡಿಸಿದರು;

"ಲಾಗಾ ಹಾಕೋ,
ಮಂಗಣ್ಣಾ!
ಥೈ ಥೈ ಕುಣಿಯೋ,
ತಿಮ್ಮಣ್ಣಾ!
ಕೋಳಿಯ ಗಂಡನೆ
ಕಪಿಯಣ್ಣಾ,
ಮದುವಣಿಗನು ನೀ
ಹೌದಣ್ಣಾ.

ಮೃಗವದು ಹಕ್ಕಿಯ
ವರಿಸುವುದು
ನಿನ್ನಿಂ ಮೊದಲಾ
ದುದು ಇಂದು,
ನೀನೇ ದಾರಿಯ
ತೋರಿಸಿದೆ.

ಸೀನೆ ಸುಧಾರಕ
ನೆನ್ನಿಸಿದೆ."
ಎಂದು ವಿನೋದದಿ
ಆಡಿದರು,
ಚಂದದ ಪದಗಳ
ಹಾಡಿದರು.



ಕೋಳಿಗೆ ಸೀರೆಯು
ಸುಡಿಸಿದರು;
ಚಿನ್ನದೊಡವೆಗಳ
ತೊಡಿಸಿದರು;
"ಕೊಕ್ ಕೊಕ್ ಕೋ ಕೋ
ಎಂದೆನ್ನ,
ಮಂಗನ ರಾಣಿಯು
ಸೀನಿನ್ನ.

ಬಗ್ಗಿಸುವೇತಕೆ
　ತಲೆಯನ್ನು?
ಕೊಂಕಿಸುವೇತಕೆ
　ನಡೆಯನ್ನು?
ಬಿಡು ಬಿಡು ಲಜ್ಜೆಯ,
　ಹೂಮಾಲೆ
ಕಪಿವರನಿಗೆ ಹಾ
　ಕೆಲೆ ಬಾಲೆ!"
ಎನ್ನುತ ಚೇಷ್ಟೆಯ
　ಮಾಡಿದರು.
ಹಿಗ್ಗುತ ನಲಿನಲಿ
　ದಾಡಿದರು.
ಸಂಭ್ರಮದೊಳಗಾ
　ಯಿತು ಮದುವೆ,
ಮರ್ಕಟಕುಕ್ಕುಟ
　ರಾ ಮದುವೆ.

---

೨೨. ಹುಡುಗರೂ ಕೆರೆಯೊಳಗಿನ ಕಪ್ಪೆಗಳೂ.

[ಮಳೆಗಾಲದಲ್ಲಿ ಒಂದು ದಿನ ಸಾಯಂಕಾಲ ರಾಮ ಮತ್ತು ಕೃಷ್ಣ ಎಂಬ ಹುಡುಗರಿಬ್ಬರು ಶಾಲೆಯಿಂದ ಮನೆಗೆ ಹೋಗುತ್ತಿರುವಾಗ ದಾರಿಯಲ್ಲಿರುವ ಒಂದು ಕೆರೆಯಲ್ಲಿ ಕಪ್ಪೆಗಳ ಕೂಗಾಟವನ್ನು ಕೇಳಿದರು.

ಕಪ್ಪೆಗಳಿಗೆ ಕಲ್ಲನ್ನೆಸೆದು ವಿನೋದಗೊಳ್ಳಬೇಕೆಂದು ಬಗೆದು, ಅವರು ಆ ಕೆರೆಯ ಸಮೀಪಕ್ಕೆ ಹೋಗಿ, ಹೀಗೆ ಮಾಡಿದರು:—]



ರಾಗ: ಜಂಜೋಟಿ — ಅಷ್ಟತಾಳ.

(ಕಾಂತೆ ಕೇಳು ಪ್ರಮಾದವ ಪೇಳುವೆ) ಎಂಬಂತೆ

ರಾಮ:—[ಒಂದು ಕಲ್ಲನ್ನೆಸೆದು]

ನೋಡು ನೋಡು, ಕೃಷ್ಣನೆ, ಕಪ್ಪೆ ಹಾರ್ವುದು. || ಪಲ್ಲ ||
ನಾನೆಸೆದಾ ಕಲ್ಲು | ಚೆನ್ನಾಗಿ ತಗಲುತೆ |
ಬನ್ನಬಡುವುದದು, ಭಾಪುರೆ! || ೧ ||

ಕೃಷ್ಣ:—[ಒಂದು ಕಲ್ಲನ್ನೆಸೆದು]

ನೋಡು ನೋಡು, ರಾಮನೆ, ಬಲು ಚೋದ್ಯವ. || ಪಲ್ಲ ||
ಕಪ್ಪೆಯ ಗುಂಪಿಗೆ | ತಪ್ಪದೆ ಹೊಡೆದೆನು |
ಧೊಪ್ಪನೆ ಕಲ್ಲೊಂದ ತ್ವರ್ಯದಿ. || ೨ ||

ತಡೆಯಲಾರದೆ ನನ್ನ | ಹೊಡೆತದ ನೋವನ್ನು |
ಕಡು ಬಾಧೆಪಡುವುವು, ಹಾರ್ವುವು. || ೨ ||

ರಾಮ:—ಕಪ್ಪೆಯಾಟವನಾಡ | ಲಿಪ್ಪುದು ಸೋಜಿಗ |
ಒಪ್ಪುದು ಸಂತೋಷ, ಯೋಚಿಸೆ. || ೧ ||

ನೋಡು ನೋಡು, ಕೃಷ್ಣನೆ, ಕಪ್ಪೆ ಹಾರ್ವುದು.

[ಅಷ್ಟರಲ್ಲಿ ಆ ಕೆರೆಯೊಳಗಿನ ಮುದಿಕಪ್ಪೆಯೊಂದು ಮುಂದೆ ಬಂದು, ರಾಮಕೃಷ್ಣರನ್ನು ಕುರಿತು ಇಂತೆಂದಿತು:—]

ಧಾಟಿ: (ಕಾಂತೆ ಕೇಳು) ಎಂಬ ಮೇಲಿನ ಮಟ್ಟು.

ಮಾನ್ಯ ಬಾಲರೆ, ಯೋಚಿಸಿ ನೋಡಿರಿ. || ಪಲ್ಲ ||

ಬಗೆಯಲು ಚಿಕ್ಕನ | ಸೊಗಸಾದ ಆಟವು |
ತೆಗೆವುದು ಮೂಷಿಕಪ್ರಾಣವ. || ೧ ||

ಆ ತೆರದಲಿ ನಿಮ್ಮ | ಪ್ರೀತಿಯಾಟವು ನಮ್ಮ |
ಘಾತಿಸುವುದು; ನೋವ ಸೈಸೆವೈ. || ೨ ||

ಮೋದದ ಸಮಯದಿ | ಬಾಧಿಸಿ ಪರರನು |
ಖೇದಗೊಳ್ಳಿಪುದೇನು ಯೋಗ್ಯವೇ? || ೩ ||

[ಆ ಹುಡುಗರು ಕಪ್ಪೆಯ ಬುದ್ಧಿವಾದವನ್ನು ಗ್ರಹಿಸಿ, ನಾಚಿಕೆಗೊಂಡು ತಂತಮ್ಮ ಮನೆಗೆ ನಡೆದರು]

☞ ಇಬ್ಬರು ವಿದ್ಯಾರ್ಥಿಗಳು ರಾಮಕೃಷ್ಣರಾಗಿ ನಿಂತಿರಬೇಕು. ಬಾಕಿಯವರು ಕೈಕಾಲುಗಳನ್ನು ನೆಲಕ್ಕೂರಿ, ಕಪ್ಪೆಗಳಾಗಿ ಕುಳಿತಿರಬೇಕು. ಕುಳಿತವರಲ್ಲಿ ಒಬ್ಬನು ಮುದಿಕಪ್ಪೆಯಾಗಬೇಕು. ಮತ್ತೆ ಮೇಲಿನ ಸಂವಾದವು ಅಭಿನಯಪೂರ್ವಕವಾಗಿ ನಡೆಯಲ್ಪಡಬೇಕು. ಪರಪೀಡನೆಯನ್ನು ಮಾಡಬಾರದೆಂಬ ನೀತಿಯನ್ನು ಮಕ್ಕಳಿಗೆ ಗೊತ್ತುಹಚ್ಚುವುದು ಈ ಪಾಠದ ಉದ್ದೇಶವಾಗಿದೆ.

೨೩. ಬಣ್ಣಗಳು.

ನೀಲ, ಹಳದಿ, ಕೆಂಪು—ಮೂರು
ಮೂಲಬಣ್ಣಗಳ್.
ಬಾಲ, ಬೆರಸಲವನು ಹಲವು
ಮಿಶ್ರಬಣ್ಣಗಳ್. ‖ ೧ ‖

ನೀಲ ಹಳದಿ ಕೂಡಿಸಿದರೆ
ಬಣ್ಣ ಹಸುರದು.
ಕೇಳು, ಕೆಂಪು ಹಳದಿ ಬೆರಸೆ
ಬಣ್ಣ ಕಿತ್ತಳೆ. ‖ ೨ ‖

ನೀಲ ಕೆಂಪು ಸೇರಿಸಿದರೆ
ಬಣ್ಣ ನೇರಳೆ.
ಆಲಿಸಿಂತು ಬೆರಕೆಯಿಂದ
ಹಲವು ಬಣ್ಣಗಳ್. ‖ ೩ ‖

---

೨೪. ತೋಳನೂ ಕುರಿಮರಿಯೂ.

[ಒಂದು ಹೊಳೆಯ ಕೆಳಪಾರ್ಶ್ವದಲ್ಲಿ ಒಂದು ಕುರಿಮರಿಯು ನೀರು ಕುಡಿಯುತಿತ್ತು. ಅಷ್ಟರಲ್ಲಿ ತೃಷೆಯಿಂದ ಬಳಲಿದ್ದ ಒಬ್ಬ ತೋಳನು ಬಾಯಾರಿಕೆಯನ್ನು ಕಳೆಯಲೆಂದು ಅದೇ ಹೊಳೆಗೆ ಮೇಲ್‌ಪಾರ್ಶ್ವದಿಂದ

ಬಂದನು. ತೋಳನ ದೃಷ್ಟಿಯು ಹಠಾತ್ತಾಗಿ ಕುರಿಮರಿಯ ಮೇಲೆ ಬೀಳಲು, ಅವರೊಳಗೆ ಹೀಗೆ ಸಂಭಾಷಣೆ ನಡೆಯಿತು:—]



ರಾಗ: ಜಂಗಲಾ — ಅಟತಾಳ.

(ನಿಲ್ಲೆಲೊ ನಿಲ್ಲೆಲೊ ನೀಚನೆ ಛೀ) ಅಥವಾ

(ಭ್ರಷ್ಟಳೆ ಎನ್ನನು ಮುಟ್ಟದಿರೀಗಲೆ) ಎಂಬಂತೆ

ತೋಳ:- ಏನೆಲೊ ಕುರಿಮರಿ? | ಹೀನವಿಚಾರಿ, |
ಮಾನಿಸದೆನ್ನನು | ತೋರುವೆ ಮದವಾ. || ಪಲ್ಲ ||

ಶ್ರೇಷ್ಠನು ನಾನು | ಕುಡಿಯುವ ನೀರನು |
ಭ್ರಷ್ಟನೆ, ಕದಡುವೆ | ಏತಕೆ?— ಹೇಳೋ. || ೧ ||

ರಾಗ: ಕಮಾಚ್ – ತಾಳ: ಮಿಶ್ರಚಾಪು.

(ಮಾತಾಡಬಾರದೇನೊ । ಮಾರಮಣನೆ) ಎಂಬಂತೆ

ಕುರಿಮರಿ:- ಕುಪಿತನಾಗುವುದೇತಕೆ? | ದೀನನೊಳಿಂತು— |
ಅಪರಾಧಿ ನಾನಲ್ಲ, | ಹೇ ತೋಳರಾಯನೇ! || ಪಲ್ಲ ||

ಮೇಲಿರುತಿಹೆ ನೀನು, | ಕೆಳಗೆ ನಿಂತಿಹೆ ನಾನು, |
ಮೇಲಕೆ ಕೆಳಗಿಂದ | ಜಲವು ಹರಿವುದೇನು? ‖ ೧ ‖

(ನಿಲ್ಲೆಲೊ ನಿಲ್ಲೆಲೊ) ಎಂಬ ಮೇಲಿನ ಮಟ್ಟು

ತೋಳ:– ಸಾಕೆಲೊ, ಕುಮತಿಯೆ, | ಕಪಟದ ನುಡಿಗಳು. |
ಜೋಕೆಯಿಂದ ನುಡಿ, | ಖೂಳನೆ, ಪಾಪೀ! ‖ ೧ ‖

ಒಂದು ವರ್ಷದ ಹಿಂದೆ | ಮಂದಿಯೆಲ್ಲರ ಮುಂದೆ |
ಖಂಡಿಸಿ ಎನ್ನನು | ಬೈದುದದೇಕೋ? ‖ ೨ ‖

(ಮಾತಾಡಬಾರದೇನೊ) ಎಂಬ ಮೇಲಿನ ಮಟ್ಟು

ಕುರಿಮರಿ:– ಕುಪಿತನಾಗುವುದೇತಕೆ?—ದೀನನೊಳಿಂತು— |
ಅಪರಾಧಿ ನಾನಲ್ಲ, | ಹೇ ತೋಳರಾಯನೇ! ‖ ಪಲ್ಲ ‖

ಧರೆಯಲಿ ನಾ ಹುಟ್ಟಿ | ಆರು ಮಾಸವದಾಯ್ತು. |
ಅರಸನೆ, ಇಂತಿರೆ, | ನಿನ್ನ ಜರೆವೆನೆಂತೋ? ‖ ೧ ‖

(ನಿಲ್ಲೆಲೊ ನಿಲ್ಲೆಲೊ) ಎಂಬ ಮೇಲಿನ ಮಟ್ಟು

ತೋಳ:– ನೀನಲ್ಲದಿದ್ದರೆ | ನಿನ್ನನು ಹೆತ್ತಾತ |
ಶ್ವಾನ ನಿನ್ನಪ್ಪನು | ಬೈದಿರಬೇಕು. ‖ ೧ ‖

ಆದರಿಂದ ನಿನ್ನನು | ಬರಿದೆ ಬಿಡೆನು ನಾನು. |
ಸದೆಬಡಿಯುತೆ, ಶಿ | ಕ್ಷಿಸಿ, ಭುಂಜಿಪೆನು. ‖ ೨ ‖

[ಇಂತೆಂದು ತೋಳನು ಆ ಬಡ ಕುರಿಮರಿಯ ಮೇಲೆ ಬಿದ್ದು, ಅದನ್ನು ಕೊಂದು, ತಿಂದನು.]

☞ ವಿದ್ಯಾರ್ಥಿಯೊಬ್ಬನು ಕುರಿಮರಿಯಾಗಿ ನೆಲದಲ್ಲಿ ಕುಳಿತಿರಬೇಕು. ಮತ್ತೊಬ್ಬನು ತೋಳನಾಗಿ ಸ್ವಲ್ಪ ಎತ್ತರ ಜಾಗದಿಂದ ಬಂದು, ಮತ್ತೆ ಕುಳಿತುಕೊಳ್ಳಬೇಕು. ಮತ್ತೆ ಮೇಲಿನ ಸಂವಾದವು ಅವರಿಂದ ಅಭಿನಯಪೂರ್ವಕವಾಗಿ ನಡೆಯಲ್ಪಡಬೇಕು. ದುಷ್ಟರ ಸ್ವಭಾವವು ನ್ಯಾಯನೀತಿಗಳನ್ನು ಲಕ್ಷಿಸುವಂತಹುದಲ್ಲ ಎಂಬುದೇ ಈ ಕಥೆಯ ತಾತ್ಪರ್ಯವು.

೨೫. ಪಂಜರದ ಗಿಳಿಯ ಪ್ರಲಾಪ



ರಾಗ: ಶಂಕರಾಭರಣ — ಆದಿತಾಳ.

(ಐ ಮಾತೃಭೂಮಿ ತೇರೆ) ಎಂಬಂತೆ

ಹೇ ಮನುಜ, ಎನ್ನ ಹಿತವ |
ಬಯಸುತ್ತ ನೀನು ಹೊಳೆವ |
ಚೆಲುವಾದ ಪಂಜರವನು |
ಇರಲೆನಗೆ ಕಟ್ಟಿಸಿರುವೆ. ‖ ೧ ‖

ಸವಿಯಲ್ಕೆ ಹಣ್ಗಳನ್ನು, |
ಇನಿವಾಲನೀವೆ ನೀನು. ‖
"ರಾಮಪ್ಪ" ಎಂದು ನನ್ನ |
ಕರೆದೋತು ನುಡಿವೆ ನಿರತ. ‖ ೨ ‖

ಇನಿತಾದರೂ ನಿನ್ನನ್ನು |
ಅಭಿವಂದಿಸೆನ್ನೆ ನಾನು. ‖

ಆ ಪ್ರಕೃತಿಯಲ್ಲಿ ಹರಿವಾ |
ಸುಖವನ್ನು ಕಾಣೆನಿಲ್ಲಿ. ‖ ೩ ‖

ಒಡನಾಡಿಗಳನು ಕೂಡಿ, |
ಒಡಲನ್ನು ಗಾಳಿಗೊಡ್ಡಿ, ‖
ಮರದಿಂದ ಮರಕೆ ಹಾರ್ವ |
ಗೆಲವೆಲ್ಲಿ? — ಕಾಣೆನಿಲ್ಲಿ. ‖ ೪ ‖

ಮರದಲ್ಲಿ ಎಲೆಯೊಳಡಗಿ, |
ಆ ಪಚ್ಚೆ ಹಸುರಿನಲ್ಲಿ ‖
ಸವಿಹಣ್ಣುಗಳನ್ನು ಮೆಲುವಾ |
ಸಲವೆಲ್ಲಿ? — ಕಾಣೆನಿಲ್ಲಿ. ‖ ೫ ‖

ಗೂಡೆನಗೆ ಬೇಡ, ನೋಡಾ |
ಕಾಡೊಳಗೆ ಗಿಡುಗಬೀಡ ‖
ಸೇರುತ್ತ ಬಾಳ್ವ ಸುಖವೇ |
ಲೇಸೆನಗೆ, ಬಿಡಿಸೊ, ವಿಭುವೇ! ‖ ೬ ‖

☞ ವಿದ್ಯಾರ್ಥಿಯೊಬ್ಬನು ಗಿಳಿಯಾಗಿ ಮೇಲಿನ ಪ್ರಲಾಪವನ್ನು ಅಭಿನಯ ಪೂರ್ವಕವಾಗಿ ಮಾಡಬೇಕು.

---

೨೬. ಅಣ್ಣನ ಮರುಕ.


[ಸಾವನ್ನೇ ಅರಿಯದ ಒಬ್ಬ **ಬಾಲಕನು** ತನ್ನ ತಮ್ಮನು ಸತ್ತು ಹೋದುದರ ಅರ್ಥವನ್ನು ಗ್ರಹಿಸದೆ, ತನ್ನ ತಾಯೊಡನೆ ಈ ರೀತಿಯಲ್ಲಿ ವಿಲಾಪಿಸಿದನು:—]

ರಾಗ: ಕಲ್ಯಾಣಿ — ರೂಪಕತಾಳ.

(ಪತಿದಾನವಾ ಕೊಡು ರಾಜಾ) ಎಂಬಂತೆ

ಅವನೆಲ್ಲಿ ಹೋದನು, ಅಮ್ಮಾ, |
ಕಿರುಬಾಲ ಕಿಟ್ಟನು ನಮ್ಮಾ? || ಪಲ್ಲ ||
ಅವನಿಲ್ಲದಾಟಪಾಟ |
ಬರಿದಾಗಿ ತೋರುವುದಮ್ಮಾ! || ಅ. ಪ. ||

ನಾ ಚೆಂಡನಾಡುವ ವೇಳೆ |
ಆ ಚೆಂಡು ದೂರಕೆ ಬೀಳೆ, ||
ತಾ ಪುಟ್ಟ ಹೆಜ್ಜೆಯೊಳೋಡಿ, |
ಮುದಗೊಂಬನದನು ಬಿಸಾಡಿ. || ೧ ||



ನಾನೋದುತಿರೆ ಪಾಠವನು, |
ಹಿಂಭಾಗದಿಂದಲೆ ಬಂದು ||
ನನ್ನೆರಡು ಕಣ್ಗಳ ಮುಚ್ಚಿ, |
"ಯಾರೆಂದು ಹೇಳ್" ಎನ್ನುವನು. || ೨ ||

ಪದ ಹಾಡಿ, ದೇವರ ನುತಿಸಿ |
ಭಜಿಸುತ್ತ ನಾನಿರೆ, ಗಮಿಸಿ, ||
ತೊದಲಿಂದ ಗೀತವನದನು |
ನಲವಿಂದ ಅನುಕರಿಸುವನು. || ೩ ||

ಸೊಗದಿಂದ ಮಲಗಿರಲೆನ್ನ |
ಕಾಲೇರಿ, ನೆಗೆಯುತ, "ಮುಸ್ತ ||
ಅಣ್ಣಯ್ಯ, ಕುದುರೆಯ ಆಟ |
ಆಡೀಗ" ಎನ್ನುವನವನು. || ೪ ||

ಆ ತಮ್ಮನನು ಕಾಣದಲೆ |
ಕಾತರಿಪೆನೀಗಲೆ ಹೇಳೆ ||
ಅವನಿರ್ಪ ತಾಣವನ್ನು, |
ಕರತರುವೆ ನಾನನುಜನನು. || ೫ ||

ಧರಿಸಿರ್ಪೆ ಮೌನವನೇಕೆ? |
ಕಣ್ಣೀರ ಸುರಿಸುವೆಯೇಕೆ? ||
ಆ ಕೆಟ್ಟ ಗುಮ್ಮನು ಅವನ |
ಎಳೆದೊಯ್ದನೇ? — ಬಾಲಕನ. || ೬ ||

[ಶ್ವಸನಾಕ್ರಾಂತಳಾದ **ತಾಯಿಯು** ಹೀಗೆ ನುಡಿದಳು:—]

(ಪತಿದಾನವಾ) ಎಂಬ ಮೋಲಿನ ಮಟ್ಟು

ಏನೆಂಬೆ, ಬಾಲನೆ, ವ್ಯಥೆಯಾ? |
ನೀನರಿಯೆ ಲೋಕದ ಕಥೆಯಾ. ||
ಒಯ್ದಿಲ್ಲ ಗುಮ್ಮನು, ದೇವಂ |
ಪರಲೋಕಕವನನು ಕರೆದಂ. || ೧ ||

ಕಂದಯ್ಯ ಬಾರನು, ಅವನು ।
ಮುಖಚಂದ್ರ ತೋರನು ಇನ್ನು. ॥
ಮುದ್ದಾಟ ನಲಿದಾಟಗಳಾ ।
ಸೊಬಗನ್ನು ಬೀರನು ಇನ್ನು. ॥ ೨ ॥

ಅವನೆಮ್ಮ ಕೂಟವ ಬಿಟ್ಟಂ, ।
ಒಡನಾಟವನ್ನು ಬಿಟ್ಟಂ. ॥
ಬಹು ದೂರದೂರಕೆ ಸರಿದಂ, ।
ಬರಲಾರನೆಂದಿಗು ಸತ್ಯಂ. ॥ ೩ ॥

ಆ ಕಾಲ ಬರಲಾ ದೇವಂ ।
ಪರಲೋಕಕೆಮ್ಮನು ಕರೆವಂ. ॥
ಆರಗಿಣಿಯ ಕಾಂಬೆವು ಅಲ್ಲಿ, ।
ಅದುವರೆಗು ಕಂಬನಿಯಿಲ್ಲಿ. ॥ ೪ ॥

☞ ವಿದ್ಯಾರ್ಥಿಯೊಬ್ಬನು ಬಾಲಕನಾಗಬೇಕು. ಮತ್ತೊಬ್ಬನು ತಾಯಿ ಆಗಬೇಕು. ಮತ್ತೆ ಮೇಲಿನ ಸಂಭಾಷಣೆಯು ಅವರಿಂದ ಅಭಿನಯಪೂರ್ವಕವಾಗಿ ನಡೆಯಲ್ಪಡಬೇಕು.

---

೨೭. ಆರೋಗ್ಯಗೀತ.

ರಾಗ: ಸುರುಟಿ — ತಾಳ ಮಿಶ್ರಚಾಪು.

(ಗಾಂಧಿ ಮಹಾತ್ಮನಿಗೆ ಜಯಜಯ) ಎಂಬಂತೆ

ಆರೋಗ್ಯವೆ ಭಾಗ್ಯ । ಎನ್ನುವ ।
ಆರ್ಯೋಕ್ತಿಯು ಯೋಗ್ಯ. ॥ ಪಲ್ಲ ॥
ಆರಯ್ಯುತಲಾ । ಭಾಗ್ಯಸೂತ್ರಗಳ ।
ಸಾರವ, ನೀವಾ । ಚಾರದಿ ವಹಿಸಿರಿ. ॥ ಅ. ಪ. ॥

ಕೊಳಕು ಕಲ್ಮಷಗಳಾ | ನೋಡುತೆ |
ಕಳವಳಗೊಳ್ಳದರಾರ್? |
ಕಳೆಯುವುದದರಿಂ | ಮಲಿನತೆಯನು ನಿ |
ರ್ಮಲ ವಸನಗಳನು | ತಳೆವುದು ನಿತ್ಯವು. ‖ ೧ ‖

ಅನ್ನವ ತ್ಯಜಿಸುವುದೇ | ಹೆಚ್ಚಿನ |
ಅನ್ನವನುಣ್ಣುವುದೇ |
ಬನ್ನಗೊಳಿಸಿ ತನು | ವನ್ನು ಕೆಡಿಸುವುದು, |
ನಿರ್ಣಯದಾಹಾ | ರವ ಸೇವಿಸುವುದು. ‖ ೨ ‖

ನಿದ್ದೆಯ ತೊರೆಯುವುದೇ | ಮೇಣತಿ |
ನಿದ್ದೆಯ ಮಾಡುವುದೇ |
ಬುದ್ಧಿಗೆಡಿಸಿ ಶಾಂ | ತಿಯ ಕಳೆವುದು, ಮಿತ |
ನಿದ್ದೆಯೊಳಿರಬೇಕೈ ಸಂತತವು. ‖ ೩ ‖

ಮನೆಯನು, ಹಿತ್ತಲನು, | ಹೊರಗಿನ |
ವನವನು, ಬೀದಿಯನು, |
ಅನುದಿನ ಶುಚಿಯಾ | ಗಿರಿಸುತ ರೋಗದ |
ನೆನಹಿಂಗೆಡೆಗೊಡದಿರುವುದು ನಿರತವು. ‖ ೪ ‖

☞ ಆರೋಗ್ಯಸಪ್ತಾಹ (Health and Baby Week) ವನ್ನು ಆಚರಿಸುವಾಗ ಈ ಗೀತವನ್ನು ವಿದ್ಯಾರ್ಥಿಗಳಿಂದ ಹಾಡಿಸಬೇಕು.

೨೮. ನೆರೆ.

ಅದೊ ನೋಡು, ನೀರು ಮೇಲ್
  ಮೇಲೇರುತಿಹುದು,
ಗಾಳಿಯಾ ರಭಸಕ್ಕೆ
  ಉಕ್ಕೇರುತಿಹುದು,
ದೇಗುಲದ ಅಂಗಣವ
  ಹೊಕ್ಕಿತದೊ ನೋಡು,
ಬಾಗಿನಿಂದಾ ರಥವ
  ಕೊಚ್ಚಿತದೊ ನೋಡು.
ನೆರೆ ಬಂತು, ನೆರೆ ಬಂತು,
  ಅಮಮ ನೆರೆ ಬಂತು!
ನೆರೆಹಾಕಲೆಮ್ಮನ್ನು
  ಗಜರಿಸುತ ಬಂತು!

ಭೋರೆಂದು ರಭಸದಿಂ
  ಮೊರೆಯುವುದು, ನೋಡು,
ಕಾರಿ ಕೆನ್ನೀರ, ನೆಲ
  ಕೊರೆಯುವುದು, ನೋಡು,
ಸೊಕ್ಕಿರುವ ಸಿಂಹದೊಲು
  ಕೋಪದಿಂ ದುಡುಕಿ,
ಸಿಕ್ಕಿದುದ ಲೆಕ್ಕಿಸದೆ
  ಮುಕ್ಕುವುದು ಹುಡುಕಿ.

ಮರಬಿದಿರುಗಳನೆಳೆದು,
  ಸೆಳೆದು, ಸುಳಿಸುಳಿದು,

ಭರದಿಂದ ಕಟ್ಟೋಣಗಳ
   ಕೆಡವಿ, ಮುಳಿದು,
ನೆರೆಯುಕಟ ಹೊಳೆಯನ್ನು
   ಹಿಡಿದು, ತಾ ದುಡುಕಿ,
ಮೊರೆಯುವುದು ಗಾಯದಾ
   ಹುಲಿಯಂತೆ, ಧುಮುಕಿ

ಮೇಲಮೇಲಕೆ ಬಂತು,
   ಸೀರಯ್ಯೊ ಬಂತು,
ಕಾಲಭೈರವನಂತೆ
   ಗರ್ಜಿಸುತ ಬಂತು,
ಗದರಿಸುತ, ಬೆದರಿಸುತ,
   ಕೆಂಬಣ್ಣವಾಂತು,
ಸದೆಬಡಿದು ಕೇರಿಗಳ
   ಊರುಗಳ, ಮುಳಿದು,
ಬೆಳೆಗಳನು, ಕಳೆಗಳನು
   ಕಿತ್ತೊಗೆದು, ಬಗಿದು
ಹೊಲಗಳನು, ಫಲಗಳನು
   ತೆಗೆದುಗಿದು, ಚಿಗಿದು,
'ಹತ್ತುಜನರಾ ಮರಣ
   ಮದುವೆಗೆ ಸಮಾನ'
ಎಂಬ ಹದನವ ತಿಳಿಯ
   ಲೆಂದೊ ಮುಂಜರಿದು,
ನೆರೆ ಬಂತು, ನೆರೆ ಬಂತು,
   ಆಮಮ ನೆರೆ ಬಂತು,

ಸೆರೆಹಾಕಲೆಮ್ಮನ್ನು
  ಗಜರಿಸುತ ಬಂತು.

ಪ್ರಳಯಕಾಲವು ಇಂದೆ
  ಬಂದಿತೇ, ನಮಗೆ?
ನೆಲದ ಮೇಲಣ ಋಣವು
  ಸಂದಿತೇ?—ಹೊರಗೆ
ಅಂಗಣದಿ ನೊರೆಯಾಗಿ,
  ನೆರೆಯಾಗಿ ಬಂದು
ಕಾಲನಾರ್ಭಟದಿಂದ
  ನಮ್ಮ ಗದರಿಪುದು.
ಎಲ್ಲೆಲ್ಲಿಯೂ ನೀರು
  ನಾಲ್ಕು ಕಡೆಯಲ್ಲು,
'ದೇವೇಶ, ಕಾಪಾಡು!'
  ಇದೆ ನಮ್ಮ ಸೊಲ್ಲು.

---

೨೯. ಬೇಡಿಕೆ.

ರಾಗ: ಕೇದಾರ — ಝಂಪೆತಾಳ.

(ಏನೀಗ ನಾ ಗೈವೆ) ಎಂಬಂತೆ

ಪರಮಾತ್ಮ, ನೀನೆನ್ನ
  ತಾಯಿಯುದರಿಂದ ಸಲೆ |

ಕರುಣೆಯಿಂ ಮಮತೆಯಿಂ
   ಪಾಲಿಸೈ ಎನ್ನ. ‖ ಪಲ್ಲ ‖

ತಾಯಿಹಕ್ಕಿಯು ನೀನು,
   ಕಿರುಮರಿಯು ನಾನೆನಲು, |
ಪ್ರೀಯದಿಂ ಸಂಪದದ
   ತಿನಿಸನೂಡುವುದೈ. ‖ ೧ ‖

ಹಸು ನೀನು, ಪ್ರೇಮದಾ
   ಎಳಗರುವು ನಾನೆನಲು, |
ಒಸೆದು ತಿಳಿವಿನಬೆಳಕ
   ಹಾಲ ಕುಡಿಸುವುದೈ. ‖ ೨ ‖

ಪಡೆದ ಮಾತೆಯು ನೀನು,
   ಕಿರುಕಂದ ನಾನೆನಲು, |
ಪಿಡಿದೆನ್ನ ಕೈಯ ಬಾಳ್-
   ಗಡಲ ದಾಂಟಿಪುದೈ. ‖ ೩ ‖

ಆದಿಪದಗಳ ಸೂಚಿ

	ಪುಟ
ಅದೊ ನೋಡು, ನೀರು ಮೇಲ್ .	40
ಅರಗಿಳಿ, ಮಂಗಿಳಿ, ಬಾರಿಲ್ಲಿ . .	7
ಅರರೆ ಬೆಕ್ಕೆ, ನಿನ್ನ ಸೊಕ್ಕೆ . .	2
ಅರಳಿಯಮರವೇ, ಮರಗಳಿಗರಸೇ .	24
ಅವನೆಲ್ಲಿ ಹೋದನು, ಅಮ್ಮಾ . .	35
ಆದಿತ್ಯವಾರ ಕಲ್ಕತ್ತವನು ಸೇರ್ದೆ .	3
ಆರೋಗ್ಯವೆ ಭಾಗ್ಯ ಎನ್ನುವ . .	38
ಎಲೆ ಗಡಿಯಾರವೆ ನಿನ್ನಾಕಾರವೆ .	16
ಎಲೆ ಹಸುಕಾಯೆ, ನಿನ್ನುಪಕಾರವ .	4
ಏನೆಲೊ ಕುರಿಮರಿ, ಹೀನವಿಚಾರಿ .	31
ಕರುಣಾಭರಣಾ, ಶರಣಾದರಣಾ .	1
ಗಿಡ್ಡದ ಬಾಲಪ. ಉದ್ದದ ಗಡ್ಡದ .	11
ಚಂದಿರ, ಶೋಭಾ . .	18
ಜೋ ಜೋ ಸೊಬಗಿನಕಣಿ, ಭಾಗ್ಯಮಣಿಯೇ .	9
ತಾತನು ಕೊಟ್ಟನು ದಬ್ಬಿಯನೊಂದನು .	14
ದಾಸರ ನೋಡಿದಿರೊ, ತಿರುಪತಿ . .	10
ನೀಲ, ಕೆಂಪು, ಹಳದಿ — ಮೂರು .	31
ನೋಡು ನೋಡು, ಕೃಷ್ಣನೆ, ಕಪ್ಪೆ ಹಾರ್ವುದು .	28
ಪರಮಾತ್ಮ, ನೀನೆನ್ನ . .	42
ಬನ್ನಿರಿ, ಬನ್ನಿರಿ ಬಾಲೆಯರೆಲ್ಲರು .	23
ಬಿಸಿಲೂ ಮಳೆಯೂ . .	25
ಬೇಟೆನಾಯಿ, ಮಂದೆನಾಯಿ . .	8
ಮನೆಗೆಲಸದ ಪರಿಯುಸುರುವೆನೀಗಲೆ .	26
ಮೋದಗೊಂಡು ನಗಲು ಸ್ವರ್ಗ .	13

ವೀಣೆಯ ಕೊಡು ಗೆಳತೀ, ಹೇಮಾವತಿ . 17

ಸ್ವಾಗತಂ ಸ್ವಾಗತಂ ಸುಸ್ವಾಗತಂ . 12

ಸೀಮೆಯದಾವುದು . . 5

ಸೊಬಗಿನ ನವಿಲಿನ . . 21

ಹೇ ಮನುಜ, ಎನ್ನ ಹಿತವ . . 34

ತಿದ್ದುಪಡಿ (೧೮ನೆಯ ಪಾಠದಲ್ಲಿ)

ಪುಟ	ಪಂಕ್ತಿ	ತಪ್ಪು	ಒಪ್ಪು
22	12	ಕುಣಿಯೈ	ಕುಣಿಕುಣಿಯೈ

ಶ್ರೀಯುತ ಜಿ. ಎನ್. ಲಕ್ಷ್ಮಣ ಪೈಗಳಿಂದ ರಚಿತವಾದ

೧. ಸಚಿತ್ರ ಪದ್ಯರತ್ನಾವಳಿ (ಪ್ರಥಮ ಭಾಗ)

[ನಾಲ್ಕನೆಯ ಆವೃತ್ತಿ]

ಕ್ರಯ: ೦—೩—೬

ನೀತಿಕಥೆಗಳನ್ನೂ ನೀತಿಪಾಠಗಳನ್ನೂ ಒಳಗೊಂಡ ಈ ಪುಸ್ತಕವು ಮದರಾಸು ಮುಂಬಯಿ ಟೆಕ್ಸ್ಟ್‌ಬುಕ್ ಕಮಿಟಿಗಳಿಂದ ಶಾಲೆಗಳ ಪಠ್ಯ ಪುಸ್ತಕವಾಗಿಯೂ, ಮೈಸೂರು ಟೆಕ್ಸ್ಟ್‌ಬುಕ್ ಕಮಿಟಿಯಿಂದ ಲೈಬ್ರೆರಿ ಪುಸ್ತಕವಾಗಿಯೂ ಮಂಜೂರಾಗಿರುವುದು.

ಕೆಲವು ಅಭಿಪ್ರಾಯಗಳು

Praktana Vimarsa Vichakshana Rao Bahadur **Sriman R. Narasimhacharya**, M. A., M. R. A. S. Bangalore: " . . . . . The verses run smoothly and are simple in style. The book deserves to be made a text in Primary Schools. . ."

ಶ್ರೀ. ಬೆನಗಲ್ಲ ರಾಮರಾಯರು, ಎಮ್. ಎ., ಎಲ್. ಎಲ್. ಬಿ. ಬೆಂಗಳೂರು: " . . . . . . ಮೊದಲನೆಯದರ [ಕನ್ನಡ ಪದ್ಯರತ್ನಾವಳಿಯ] ಮೂರು ಮುದ್ರಣಗಳೂ ಎರಡನೆಯದರ [ಕೀರ್ತನಾಂಜಲಿಯ] ಒಂದು ಮುದ್ರಣವೂ ಇದಕ್ಕೆ ಮೊದಲೇ ಆಗಿಹೋಗಿರುವ ಸಂಗತಿಯು, ತಮ್ಮ ಕವಿತೆಯು ಕರ್ಣಾಟಕ ಮಹಾಜನರ ಆದರವನ್ನು ಪಡೆದಿರುವುದರ ದ್ಯೋತಕವಾಗಿದೆ. ಮುದ್ರಣವೂ ದಿವ್ಯವಾಗಿದೆ. . . . . . . ದೈವಿಕವಾಗಿ ತಮ್ಮಲ್ಲಿ ಹುಟ್ಟಿಬಂದಿರುವ ಕವಿತಾಶಕ್ತಿಯು ದಿನಕ್ರಮವಾಗಿ ವರ್ಧಿಸಿ, ತಮ್ಮ ಪುಸ್ತಕಗಳು ಇತ್ಯೋಪತಿಶಯವಾಗಿ ಜನತೆಯ ಮಾನ್ಯತೆಯನ್ನು ಪಡೆಯಲೆಂದು ಹಾರೈಸುತ್ತೇನೆ. . ."

ವಿದ್ವಾನ್ ಶ್ರೀ. ಮುಳಿಯ ತಿಮ್ಮಪ್ಪಯ್ಯನವರು, ಕನ್ನಡ ಪಂಡಿತರು, ಸೈಂಟ್ ಎಲೋಸಿಯಸ್ ಕಾಲೇಜ್, ಮಂಗಳೂರು: " . . . . ಈ ಮಧ್ಯೆ ಕೆಲಕೆಲವು ಕಥೆಗಳೂ ಪದ್ಯರೂಪವಾಗಿ ಮಾರ್ಪುಗೊಂಡದರಿಂದ ಹುಡುಗರಿಗೆ ಉತ್ಸಾಹಕರವಾಗಿದೆ. ಇಂಥವುಗಳನ್ನು ಇಲಾಖೆಯವರೂ ಶಾಲಾಧಿಕಾರಿಗಳೂ ಪಠ್ಯ ಪುಸ್ತಕವನ್ನಾಗಿ ಮಾಡಿದರೆ ಒಂದು ಕೆಲಸದಿಂದ ಎರಡು ಫಲದ ಲಾಭವಾದೀತು . . ."

The Modern Review, Calcutta: " . . . The attempt is quite laudable . . . . The book is no doubt well-fitted for the use of Primary Schools."

೨. ಕೀರ್ತನಾಂಜಲಿ (ಪ್ರಥಮ ಭಾಗ)

[ಎರಡನೆಯ ಆವೃತ್ತಿ]

ತತ್ತ್ವಬೋಧಕವಾದ ಹಾಡುಗಳಿಂದಲೂ ಹಲವು ಭಜನಾಗೀತಗಳಿಂದಲೂ ಕೂಡಿದ ಈ ಪುಸ್ತಕವು ಮದರಾಸು ಟೆಕ್ಸ್ಟ್‌ಬುಕ್ ಕಮಿಟಿಯಿಂದ ಲೈಬ್ರೆರಿಗಳ ಮತ್ತು ಅಧ್ಯಾಪಕರ ಬಗ್ಗೆಯೂ, ಮುಂಬಯಿ ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಾಲೆಗಳ ಇನಾಮಿನ ಬಗ್ಗೆಯೂ ಮಂಜೂರಾಗಿದೆ.

ಕೆಲವು ಅಭಿಪ್ರಾಯಗಳು

ಶ್ರೀ ಗೋವಿಂದ ಪೈಗಳು, ಮಂಜೇಶ್ವರ: " . . . ಕವಿತೆಗಳು ಬಲು ಚಲೋದಾಗಿವೆ – ಭಕ್ತಿಯಿಂದ ತುಳುಕುತ್ತಲಿವೆ ಎದೆ ತುಳುಕಿಸುತ್ತಲಿವೆ . . ."

ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದೂರ್, **ಶ್ರೀ. ರಾ ನರಸಿಂಹಾಚಾರ್ಯರು,** ಎಮ್. ಎ., ಎಮ್. ಆರ್. ಎ. ಎಸ್., ಬೆಂಗಳೂರು: " . . . ಹಾಡುಗಳ ಭಾವವು ಭಕ್ತ್ಯುಜ್ವಲವಾಗಿಯೂ ಶೈಲಿ ಮೃದುಮಧುರವಾಗಿಯೂ ಇವೆ. . . . . ."

Sriman T. S. Venkannaya, M. A., Kanarese Professor, Maharaja's College, Mysore: " . . . . . The lyrics contained in the book closely resemble the songs of Dasas both in matter and style and breathe devotion. I dare say the songs will become very popular . . . ."

ಮುದ್ರಕರು ವ ಪ್ರಕಾಶಕರು:—

ಹರಿಹರ ಛಾಪಖಾನೆ ಮತ್ತು ಪುಸ್ತಕಾಲಯ,

ಪುತ್ತೂರು (ದ. ಕನ್ನಡ)
